## ಪದಬಂಧ



ಎಡದಿಂದ ಬಲಕ್ಕೆ :

1. ಅವನ ಶೋಚನೀಯ ಸ್ಥಿತಿ ಸರಿಹೋಗುವುದು ಖಾತ್ರಿಯಾಗಿಲ್ಲ (4)
3. ಬಾನಿನಲ್ಲಿ ಇರಲಿಲ್ಲ ಕಿಂಚಿತ್ತೂ ಮೋಡ (3)
4. ಮಾಣಿಕ್ಯವನ್ನು ಮಾರುವ ವ್ಯಾಪಾರಿ ಗೊತ್ತೇ ? (3)
6. ಕಾಷ್ಠದಲ್ಲಿ ಕರಕೌಶಲ್ಯ ಸುಲಭದ್ದಲ್ಲ (4)
7. ಸುದೀರ್ಘ ವ್ಯಾಜ್ಯದಲ್ಲಿ ಕೊನೆಗೂ ಲಭಿಸಿತು ಯಶಸ್ಸು (3)
9. ಆಶ್ಚರ್ಯವೇನಿಲ್ಲ. ಹೀಗೇ ಆಕೆಯ ಊಟ (3)
11. ಮುಂದಿನ ಯೋಜನೆಗಳನ್ನೆಲ್ಲ ಅಡಗಿಸಿದ್ದಾಯಿತೇ ? (3)
13. ಜೇಬಿನಲ್ಲಿರುವುದೆಲ್ಲ ನೂರು ಜನ ನೀಡಿದ ಕಾಣಿಕೆ (3)
15. ಸಂಭ್ರಮದ ಕಾಲದಲ್ಲಿ ಎಲ್ಲರಿಗೂ ಒಂದೇ ಶಕ್ತಿ (4)
17. ಶಂಕೆಯೇ ಬೇಕಿಲ್ಲ, ಅಲ್ಲಿ ಎಲ್ಲವೂ ಕ್ಷೇಮ (3)
18. ಸಾಸಿರನಾಮಗಳಲ್ಲೇ ಋತುಮಾನವೂ ಒಂದಿದೆ (3)
19. ಹೇರಳ ಹೆಗ್ಗಳಿಕೆಗಳೇ ಆಕೆಯ ಭಾರೀ ಸಂಪಾದನೆ (4)

ಮೇಲಿಂದ ಕೆಳಕ್ಕೆ :

1. ಆಭರಣಕ್ಕಾಗುವುದಿಲ್ಲ, ಹೊಳಪಿದ್ದರೂ ಈ ಖನಿಜ (3)
2. ಆ ಊರಿನ ತುಂಬ ಎಲ್ಲೆಲ್ಲೂ ಅದೇನು ಲೋಹ ? (3)
3. ಯಾವ ಕಾರಣಕ್ಕೂ ವ್ಯಾಜ್ಯ ತೆಗೆಯದಂತಹ ನಿಷ್ಕಪಟ ಗುಣ (4)
5. ಶರ್ಕರಕ್ಕೆಂದು ನಡೆದ ಕೂಗಾಟ ಭಾರೀ ಜೋರು, ಒರಟು (3)
7. ವಿದ್ಯಾವಂತರ ಮಧ್ಯೆ ಇದೇನು ವಿಧ ವಿಧ ಮಾತಿನ ಕಲಹ ? (3)
8. ವಿಜಯ ಗಳಿಸುವಂತಾಗಲೆಂದು ನಡೆದ ಭಾರೀ ಹೋಮ ಕಾರ್ಯ (3)
9. ಅಧ್ಯಯನಕ್ಕೆಂದು ಬಂದವ ಅವನ ಕೈಕೆಳಗೆ ಸಿಲುಕಿದ (3)
10. ವಾನರರ ಒಡನಾಟ ತುಂಬ ನಯ , ಸೂಕ್ಷ್ಮ (3)
12. ಆ ಕುಸುಮದ ಚಿತ್ರ ತಿರುವಿ ನೋಡಿದರೆ ತುಂಬಾ ಮಬ್ಬು (3)
14. ವಜ್ರಾಯುಧ ತೊಟ್ಟರೂ ಬಿಡುವವನಲ್ಲ ಯಮ (3)
15. ಹೆಸರನ್ನು ಸರಿಪಡಿಸಲು ಆತ ನೀಡಿದ ಅಭಿಪ್ರಾಯ ? (3)
16. ಕರೆ ಕಳಿಸಿ ತರಿಸಿದ್ದು ರೋಗ ನಿರೋಧಕ ಔಷಧ ತಾನೇ ?(3)

---

### 26-1-2017ರ ಉತ್ತರಗಳು

ಎಡದಿಂದ ಬಲಕ್ಕೆ :

1. ಸಂವಾದ 3. ಬುನಾದಿ 4.ರಿವಾಜು 6. ಮರೆಗುಳಿ 7. ಕ್ಷಮೆಕೋರು
9. ತೆಪ್ಪಗಿರು 11. ಸರಂಜಾಮು 15. ರಜತ 16. ವಾದಿಸು 17. ಕಡಲು

ಮೇಲಿಂದ ಕೆಳಕ್ಕೆ :

1. ಸಂದಿಗ್ಧ 2. ದರಿದ್ರ 3. ಬುರುಗು 4. ಜುಲುಮೆ 6. ಮಮತೆ
8. ರುಸುಮು 10. ಗಿಟಾರ 12. ರಂಜಿಸು 13. ಪಾತಕ 14. ಸವಾಲು

## ಪ್ರಶ್ನಾಂಕಣ

# ಸ್ಫಿಂಕ್ಸ್: ಅದೆಂಥ ಜೀವಿ?

ಸ್ಫಿಂಕ್ಸ್ ಅದೊಂದು ಮಿಥ್ಯಾ ಜೀವಿ. ಅದು ಕೇವಲ ಪೌರಾಣಿಕ ಕಲ್ಪನೆಯ ಒಂದು ಪ್ರಾಣಿ. ಸಿಂಹದ ಶರೀರಕ್ಕೆ ಮನುಷ್ಯ ಶಿರ ಬೆಸೆಗೊಂಡಿರುವ ಈ ಪ್ರಾಣಿ (ಚಿತ್ರ 2) ಅವಾಸ್ತವಿಕವಾದರೂ ಜಗತ್ಪ್ರಸಿದ್ಧ.

ವಿಶೇಷ ಏನೆಂದರೆ ಸ್ಫಿಂಕ್ಸ್ ನ ಕಲ್ಪನೆ ಗ್ರೀಕ್ ಪುರಾಣಗಳಲ್ಲೂ, ಈಜಿಪ್ಟ್ ನ ಇತಿಹಾಸದಲ್ಲೂ ಅಷ್ಟಿಷ್ಟು ವಿಭಿನ್ನವಾಗಿ ಆದರೆ ಗಾಢವಾಗಿ ನೆಲೆಗೊಂಡಿದೆ. ಗ್ರೀಕ್ ಪುರಾಣಗಳ ಪ್ರಕಾರ ಸ್ಫಿಂಕ್ಸ್ ನದು ಸಿಂಹದ ಶರೀರಕ್ಕೆ ಹೆಂಗಸಿನ ಶಿರ. ಅದು ಹಕ್ಕಿಗಳ ರೆಕ್ಕೆಗಳನ್ನು ಕೂಡ ಪಡೆದಿದೆ. ಅಷ್ಟೇ ಅಲ್ಲದೆ ಅದು ಅಪಾರ ಶಕ್ತಿಯ, ದ್ರೋಹ ಬುದ್ಧಿಯ, ದಯಾಹೀನ ಕ್ರೂರ ದೈತ್ಯ ! ಗ್ರೀಕರ ಈ ಕಲ್ಪನೆಯಿಂದ ಸ್ವಲ್ಪ ಭಿನ್ನವಾಗಿ ಈಜಿಪ್ಷಿಯನ್ನರ ಸ್ಫಿಂಕ್ಸ್ ಸಿಂಹದ ಶರೀರಕ್ಕೆ ಗಂಡಸಿನ ತಲೆಯನ್ನು ಪಡೆದಿದೆ. ಅದಕ್ಕೆ ರೆಕ್ಕೆಗಳಿಲ್ಲ. ಮಹಾನ್ ಶಕ್ತಿಯ ಪ್ರಾಣಿಯೇ ಆಗಿದ್ದರೂ ಅದರದು ಬಹಳ ಮೃದುವಾದ ದಯಾಪರ ಸ್ವಭಾವ !

ಹಾಗೆಲ್ಲ ಕಲ್ಪನೆಗಳು ಏನೇ ಇದ್ದರೂ ಪ್ರಸ್ತುತದಲ್ಲಿ ಸ್ಫಿಂಕ್ಸ್ ನ ಭೌತಿಕ ಅಸ್ತಿತ್ವದ ಪ್ರತ್ಯಕ್ಷ ದರ್ಶನ ಲಭ್ಯವಿರುವುದು ಈಜಿಪ್ಟ್ ನಲ್ಲಿ. ಈಜಿಪ್ಟ್ ನ ರಾಜಧಾನಿ ಕೈರೋ ಸನಿಹದ ಗೀಝಾ ನಗರದಲ್ಲಿ, ನೈಲ್ ನದಿಯ ಪಶ್ಚಿಮ ದಂಡೆಯಲ್ಲಿ, ಅಲ್ಲಿನ ಪುರಾತನ ಫೇರೋ ಅರಸರ ವಿಶ್ವ ವಿಖ್ಯಾತ ಗೋರಿ ಪಿರಮಿಡ್ ಗಳ ಬಳಿಯೇ (ಚಿತ್ರ 1) ನಿರ್ಮಾಣಗೊಂಡು, ಪೂರ್ವದತ್ತ ಮುಖ ಮಾಡಿ , ಮೈಚಾಚಿ ಕುಳಿತಿರುವ ಭಂಗಿಯ ಬಂಡೆ ಶಿಲ್ಪವಾಗಿ ಈ ಪ್ರಾಣಿಯದು ಅಸ್ತಿತ್ವ(ಚಿತ್ರ 2).

ಆ ಪ್ರದೇಶದಲ್ಲಿ ಅಲ್ಲಿನ ನೆಲದ ಸುಣ್ಣ ಶಿಲೆಯ ಹಾಸಿನಲ್ಲೇ ಕಡೆಯಲ್ಪಟ್ಟಿರುವ ಈ ಅದ್ಭುತದ ಬಂಡೆ ಶಿಲ್ಪದ ಉದ್ದ 238 ಅಡಿ, ಅಗಲ 62.6 ಅಡಿ ಮತ್ತು ಎತ್ತರ 66.3 ಅಡಿ. ಹಾಗೆ ಬಹು ಬೃಹದಾಕಾರದ್ದಾಗಿರುವ ಈ ಕುಶಲ ನಿರ್ಮಿತಿ (ಚಿತ್ರ 2) ಅದರ ಸನಿಹದಲ್ಲೇ ಇರುವ ವಿಶ್ವ ವಿಸ್ಮಯದ ಪಿರಮಿಡ್ ಗಳಷ್ಟೇ ಪ್ರಸಿದ್ಧ ಕೂಡ.




ಅದರ ನಿರ್ಮಾಣದ ಕಾಲ ಮತ್ತು ಉದ್ದೇಶಗಳು ಸ್ಪಷ್ಟವಾಗಿಲ್ಲವಾದರೂ ಪ್ರಾಚೀನ ಈಜಿಪ್ಟ್ ನ ಫೇರೋ ಗಳ ಕಾಲದಷ್ಟೇ ಅತ್ಯಂತ ಪ್ರಾಚೀನ ಶಿಲಾ ಶಿಲ್ಪವಾಗಿ ಅದು ಖ್ಯಾತಿ ಗಳಿಸಿದೆ. ಈಜಿಪ್ಟ್ ನ ಸ್ಫಿಂಕ್ಸ್ ನ ನಿರ್ಮಾಣದ ಅಂದಾಜು ಕಾಲ ಕ್ರಿ. ಪೂ. 2558 ರಿಂದ 2532. ಎಂದರೆ ಈಗ್ಗೆ ನಾಲ್ಕೂವರೆ ಸಾವಿರ ವರ್ಷಗಳಿಗೂ ಸ್ವಲ್ಪ ಹಿಂದೆ !

ಇನ್ನೂ ವಿಶೇಷ ಏನೆಂದರೆ ಈಜಿಪ್ಟ್ ದೇಶದಲ್ಲಿ ಈ ಸ್ಫಿಂಕ್ಸ್ ಶಿಲ್ಪ ಈಗಲೂ ವಿಪರೀತ ಜನಪ್ರಿಯ. ಎಷ್ಟೆಂದರೆ ಅಲ್ಲಿನ ನಾಣ್ಯಗಳು, ಅಂಚೆ ಚೀಟಿಗಳು, ಸರ್ಕಾರೀ ಪತ್ರಗಳು ಇತ್ಯಾದಿಗಳಲ್ಲಿ ವಿಶಿಷ್ಟ ಲಾಂಛನವಾಗಿ ಈ ಶಿಲ್ಪದ ಚಿತ್ರ ಮುದ್ರಿತ. ಹಾಗಾಗಿ ಸ್ಫಿಂಕ್ಸ್ ನ ಅಸ್ತಿತ್ವ ಈಜಿಪ್ಟ್ ನಲ್ಲಂತೂ ಶಾಶ್ವತ.

■ ಎನ್. ವಾಸುದೇವ್